SERVICE ABOVE SELF




Rotary

विश्वमित्रः

# ವಿಶ್ವಮಿತ್ರ

# VISHWAMITHRA

Weekly House Bulletin of Rotary Club Shimoga, R.I. Dist. 3182

UNITE FOR GOOD

Rotary

Rtn. Francesco Arezzo
RI President 2025-26

| Rtn. K. Palaksha | Rtn. Anand R. | Rtn. Vishwas Y. | Rtn. M. Madhavachar |
|---|---|---|---|
| District Governor 2025-26 | President, Mob: 99800 93066 | Secretary, Mob : 99800 63180 | Bulletin Editor, Mob: 98862 73495 |

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 68 ಸಂಚಿಕೆ –06 ದಿನಾಂಕ : 06–08–2025


## ದಿನಾಂಕ: 06.08.2025ರ ವಾರದ ಸಭೆ

ಆಗಸ್ಟ್ ಮಾಹೆಯನ್ನು ರೋಟರಿಯು ಸದಸ್ಯತ್ವ ಅಭಿವೃದ್ಧಿ ಮಾಸವನ್ನಾಗಿ ಆಚರಿಸುತ್ತಿದೆ. ತನ್ನಿಮಿತ್ತ ದಿನಾಂಕ: 06.08.2025 ರ ಬುಧವಾರದಂದು ನಮ್ಮ ಕ್ಲಬ್‌ಗೆ ರೋಟರಿ ಜಿಲ್ಲೆ 3182 ರ ಸದಸ್ಯತ್ವ ಅಭಿವೃದ್ಧಿ ಸಮಿತಿ ಚೇರ್ಮನ್‌ರಾದ ರೊ. ಕೆ.ಬಿ. ಪ್ರಸನ್ನ, ಕೊಪ್ಪ ಇವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಅವರು ಸದಸ್ಯತ್ವ ಅಭಿವೃದ್ಧಿ ವಿಚಾರವಾಗಿ ಮಾತನಾಡಿದರು. ವೇದಿಕೆಯ ಮೇಲೆ ಅಧ್ಯಕ್ಷರಾದ ರೊ.ಆರ್.ಆನಂದ್‌ರವರು, ಕಾರ್ಯದರ್ಶಿ ರೊ.ವಿಶ್ವಾಸ್ ಎಲಬುರ್ಗಿಯವರು ಉಪಸ್ಥಿತರಿದ್ದು, ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಟ್ಟರು.




ಅಂದಿನ ಸಭೆಯು ರೊ.ಮಲ್ಲಿಕಾ ವಿ. ಜೋಯ್ಸ್‌ರವರಿಂದ "ಅಂಬಿಗಾ ನಾ ನಿನ್ನ ನಂಬಿದೆ" ಹಾಡಿನ ಗಾಯನದ ಮೂಲಕ ಚಾಲನೆಯಾಯಿತು. ರೊ. ಪೇಟೆ ಅಜಯ ಕುಮಾರ್‌ರವರು ಸರ್ವರನ್ನು ಸ್ವಾಗತಿಸಿದರು. ರೊ. ಡಿ.ಎಲ್. ಮಂಜುನಾಥರವರು ರೋಟರಿ ನ್ಯೂಸ್ ನೀಡಿದರು. ಕಾರ್ಯದರ್ಶಿ ರೊ.ವಿಶ್ವಾಸ್ ಎಲಬುರ್ಗಿಯವರು ಪ್ರಕಟಣೆಗಳನ್ನು ನೀಡಿದರು. ಇದೇ ಸಂದರ್ಭದಲ್ಲಿ ಈ ವಾರ ಹುಟ್ಟು ಹಬ್ಬ ಆಚರಿಸಿಕೊಂಡ ರೊ.ಕಲಾಮೃತ, ರೊ.ಶಾರದಾ ಗೋಪಾಲ್, ರೊ.ಪ್ರಮೋದಾ ಶಾಸ್ತ್ರಿಯವರು ವೇದಿಕೆಗೆ ಆಗಮಿಸಿ, ಹುಟ್ಟು ಹಬ್ಬದ ನೆನಪಿನ ಕಾಣಿಕೆ ಪಡೆದು ಅಭಿನಂದನೆಗಳನ್ನು ಸ್ವೀಕರಿಸಿದರು.

ರೋಟರಿ ಸೆಂಟಿನರಿ ಫೌಂಡೇಷನ್‌ನ ಚೇರ್ಮನ್ ರೊ. ಎನ್. ಎಸ್. ಶ್ರೀಧರ್ ಮಾತನಾಡಿ, ರೊ. ವೈ.ವಿ.ವೆಂಕಟರಮಣ ಜೋಯ್ಸ್‌ರವರು ಟ್ರಸ್ಟ್‌ಗೆ ರೂ.25,000/– ದೇಣಿಗೆ ನೀಡಿದುದರ ಬಗ್ಗೆ ತಿಳಿಸಿ, ರೋಟರಿ ಸಭಾಂಗಣದ ವೇದಿಕೆಗೆ ರೂ. 34,600/– ಮೊಬಲಗಿನ ಸ್ಟೀಲ್ ರೈಲಿಂಗ್‌ನ್ನು ರೊ.ಸೆಂಥಿಲ್ ವೇಲನ್‌ರ ನೇತೃತ್ವದಲ್ಲಿ ಮಾಡಿಸಿ ಕೊಟ್ಟಿರುವುದರ ಬಗ್ಗೆ ತಿಳಿಸಿದರು. ಅಲ್ಲದೇ ರೊ.ಸಿ.ವಿಜಯ ಕುಮಾರ್‌ರವರು ಟ್ರಸ್ಟ್‌ನ ಟ್ರಸ್ಟಿಯಾಗಿರುವುದರ ಬಗ್ಗೆ ಪ್ರಕಟಿಸಿ, ಅವರಿಂದ ಮೊಬಲಗಿಗೆ ಚೆಕ್‌ಗಳನ್ನು ಪಡೆದರು.







ಕಂಪಾನಿಯೋ ಇವರ ಸಹಯೋಗದೊಂದಿಗೆ ಉಚಿತ ಫೂಟ್ ಪಲ್ಸ್ ಥೆರಪಿ ಚಿಕಿತ್ಸಾ ಶಿಬಿರದ ಬಗ್ಗೆ ಅದರ ಮುಖ್ಯಸ್ಥರು ಮಾತನಾಡಿ ವೈದ್ಯಕೀಯ ಪ್ರಮಾಣಿತ ತಂತ್ರಜ್ಞಾನ ಬಳಸಿಕೊಂಡು ಭಾರತ ಸರ್ಕಾರದ ಮಹತ್ವದ ಯೋಜನೆಗಳಲ್ಲಿ ಒಂದಾದ ಮೇಕ್ ಇನ್ ಇಂಡಿಯಾ ಅಡಿಯಲ್ಲಿ ತಯಾರಾದ ಉಪಕರಣಗಳ ನೆರವಿನೊಂದಿಗೆ ಮೇಲ್ಕಂಡಂತೆ ಥೇರಪಿ ಚಿಕಿತ್ಸಾ ಶಿಬಿರ ನಡೆಯುತ್ತಲಿದ್ದು, ದಿನಾಂಕ: 12.08.2025 ರವರೆಗೆ ನಡೆಯಲಿದೆ. ಬೆಳಿಗ್ಗೆ 7.00 ರಿಂದ 9.30 ಮತ್ತು ಸಂಜೆ 5.00 ರಿಂದ 7.00 ರವರೆಗೆ ರೋಟರಿ ಯುವಕೇಂದ್ರದಲ್ಲಿ ನಡೆಯಲಿರುವ ಶಿಬಿರದ ಸದುಪಯೋಗ ಪಡದುಕೊಳ್ಳಲು ಮನವಿ ಮಾಡಿದರು.

## ಈ ವಾರದ ಸಭೆ

**ದಿನಾಂಕ :13-08-2025 ಬುಧವಾರ**

**ಸ್ನೇಹಮಿಲನ ಸಂಜೆ 6:30 & ಸಭಾ ಕಾರ್ಯಕ್ರಮ 7:00**



**ಕೌಟುಂಬಿಕ ಸ್ನೇಹ ಮಿಲನ**

ಸ್ವಾತಂತ್ರ್ಯ ದಿನಾಚರಣೆಯ ಪ್ರಯುಕ್ತ ವಿಶೇಷ ಕಾರ್ಯಕ್ರಮ

ಅತಿಥಿ: **ಶ್ರೀ ಚಕ್ರವರ್ತಿ ಸೂಲಿಬೆಲೆ**

ವಿಷಯ: **ಭವಿಷ್ಯದ ಭಾರತ**

ದಯಮಾಡಿ ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ.

ಸ್ಥಳ: **ರೋಟರಿ ಯುವ ಕೇಂದ್ರ**, ಸವಳಂಗ ರಸ್ತೆ, ಶಿವಮೊಗ್ಗ

ರೊ.ಎನ್.ಎಸ್. ಶ್ರೀಧರ್‌ರವರು ಮುಖ್ಯ ಅತಿಥಿಗಳ ಪರಿಚಯ ಮಾಡಿದರು. ಮುಖ್ಯ ಅತಿಥಿಗಳಾದ ರೊ. ಕೆ.ಬಿ. ಪ್ರಸನ್ನರವರು ಮೊದಲಿಗೆ ಈ ಸಭೆಗೆ ನಾನು ಬಂದಿದ್ದಕ್ಕೆ ನನಗೆ ಗೌರವ ಸಿಕ್ಕಿದಂತಾಗಿದೆ. ನಾನು ಸಣ್ಣವನಿದ್ದಾಗಿನಿಂದಲೂ ರೋಟರಿ ಸೇವಾ ಕಾರ್ಯಗಳನ್ನು ನೋಡಿದ್ದೇನೆ. ಈ ಕ್ಲಬ್‌ನಲ್ಲಿ ಸುಮಾರು 118 ಸದಸ್ಯರಿದ್ದು ಹಲವಾರು ಮಹಿಳಾ ಸದಸ್ಯರನ್ನೊಳಗೊಂಡ ಕ್ಲಬ್ ಆಗಿದೆ. ಆದರೆ ಇಂದಿನ ವಾತಾವರಣದಲ್ಲಿ ಹಾಜರಾತಿ ಕಡಿಮೆ ಎನ್ನಿಸುತ್ತಿದೆ. ಈಗ ಎಲ್ಲಾ ರೋಟರಿ ಸದಸ್ಯರುಗಳು ಸೇರಿಕೊಂಡು ಸೇವಾ ಕಾರ್ಯಗಳನ್ನು ಮಾಡಬೇಕಿದೆ. ಈ ತಿಂಗಳ ಕೊನೆಯಲ್ಲಿ ನಡೆಯಲಿರುವ ಸದಸ್ಯತ್ವ ಅಭಿವೃದ್ಧಿ ಸೆಮಿನಾರ್‌ನಲ್ಲಿ 5 ಜನರನ್ನು ರೋಟರಿಗೆ ಸೇರಿಸಿದ ರೊಟೇರಿಯನ್ನರಿಗೆ ಸನ್ಮಾನಿಸಲಾಗುವುದು. ಪ್ರಯತ್ನ ಮಾಡಿಎಂದರು. ಸದ್ಯದ ಮಾಹಿತಿಯಂತೆ ಅಮೇರಿಕಾದಲ್ಲಿ ಸುಮಾರು 50 ರೋಟರಿ ಕ್ಲಬ್‌ಗಳು ಮುಚ್ಚಿವೆ. ಆದರೆ ಭಾರತದಲ್ಲಿ ಸದಸ್ಯತ್ವ ಸಂಖ್ಯೆ ವೃದ್ಧಿಸುತ್ತಿದೆ. ಭಾರತದಲ್ಲಿ ಅದರಲ್ಲೂ ಜೋನ್ 4, 5 ಮತ್ತು 6 ರಲ್ಲಿ ಒಳ್ಳೆಯ ಕಾರ್ಯಗಳಾಗುತ್ತಿವೆ. ಈ ವರ್ಷದ ಕೊನೆಯಲ್ಲಿ ಸದಸ್ಯತ್ವ ದ್ವಿಗುಣಗೊಳ್ಳಬೇಕಾಗಿದೆ. ಈಗ ಯುವಕರಿಗೆ ಉತ್ಸಾಹದಿಂದ ಪಾಲ್ಗೊಳ್ಳಲು ರೋಟರಾಕ್ಟ್ ಸೇರಲು ರೋಟರಿಯಿಂದ ಪ್ರೋತ್ಸಾಹ ನೀಡಲಾಗುತ್ತಿದೆ.

ರೋಟರಿ ಸದಸ್ಯರನ್ನು ಆಕರ್ಷಿಸಲು ರೋಟರಿ ಸಭೆಗಳು ವರ್ಣಮಯುವಾಗಿರಬೇಕು. ಈ ಹಿಂದೆ ಸಭೆಗೆ ಹಾಜರಾತಿ ಕಡ್ಡಾಯವಾಗಿತ್ತು. ಈಗ ಸದಸ್ಯರನ್ನು ಆಕರ್ಷಿಸಲು ಪಾಲ್ಗೊಳ್ಳಲು ಅನುವಾಗುವಂತೆ ಸಭೆಗಳನ್ನು ಮಾಡಬೇಕಾಗಿದ್ದು ಯಾವ ರೀತಿ ಬೇಕಾದರೂ ಸಭೆಗಳನ್ನು ಆಯೋಜಿಸಬಹುದು. ಸಭೆಗಳಲ್ಲಿ ಹೊಸ ಸದಸ್ಯರಿಗೆ ಮಾತನಾಡಲು ಅವಕಾಶ ನೀಡಬೇಕು. ಆಗ ಅವರು ಸಭೆಗಳಲ್ಲಿ ರೋಟರಿಯ ಚಟುವಟಿಕೆಗಳಲ್ಲಿ ಪಾಲ್ಗೊಂಡಂತಾಗುವುದು. ವಿದೇಶದಲ್ಲಿ ಸದಸ್ಯರ ಸಂಖ್ಯೆ ಸಾಕಷ್ಟು ಕಡಿಮೆಯಾಗುತ್ತಿದೆ ಅಲ್ಲದೇ ಯುವಕರು ರೋಟರಿ ಸದಸ್ಯರಾಗಲು ಮುಂದೆ ಬರುತ್ತಿಲ್ಲ ಎಂದರು.

ಈಗ ನಮ್ಮ ಹಾಲಿ ಸದಸ್ಯರು www.Rotary.org ನಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಂಡಿರುವುದಿಲ್ಲ. ನೋಂದಾಯಿಸಿಕೊಂಡಲ್ಲಿ ರೋಟರಿ ಚಟುವಟಿಕೆಗಳನ್ನು ಪ್ರತಿಯೊಬ್ಬರೂ ನೋಡಬಹುದು. ರೋಟರಿ ಏನು ಕೆಲಸ ಮಾಡುತ್ತಿದೆ ಎಂದು ತಿಳಿಯಲು ಸಾಧ್ಯವಾಗುತ್ತದೆ ಎಂದರು. ರೋಟರಿ ಆ್ಯಪ್‌ಗಳನ್ನು ಡೌನ್ ಲೋಡ್ ಮಾಡಿಕೊಳ್ಳಿ. www.Rotary.org ನಲ್ಲಿ ಪ್ರತೀ ಸದಸ್ಯರ ಹುಟ್ಟು ಹಬ್ಬದ ಶುಭಾಶಯಗಳು ಬರುತ್ತದೆ. ನಮ್ಮ ಕುಟುಂಬದ ವಿವರಗಳಿರುತ್ತವೆ ಅವನ್ನು ವೀಕ್ಷಿಸಬಹುದು ರೋಟರಿ ಚಟುವಟಿಕೆಗಳನ್ನು ಅಧ್ಯಕ್ಷರು ಅಪ್‌ಲೋಡ್ ಮಾಡಬಹುದು. ಆದಷ್ಟು ರೋಟರಿಯ ಚಟುವಟಿಕೆಗಳನ್ನು ಬಿಂಬಿಸಲು ಪೇಪರ್‌ಲೆಸ್ ಮಾಡಲು ಪ್ರಯತ್ನಿಸಿದ್ದೇವೆ. ಇದಕ್ಕೆ ಮಾಜಿ ಗವರ್ನರ್‌ಎಂ.ಜಿ.ಆರ್‌ರವರ ಪ್ರೋತ್ಸಾಹವೇ ಕಾರಣ. ಅಲ್ಲದೇ ಸರ್ವಿಸ್ ಪ್ರಾಜೆಕ್ಟ್‌ಗಳನ್ನು ಸಹ ಇಲ್ಲಿ ಅಪ್‌ಲೋಡ್ ಮಾಡಬಹುದು ಎಂದರು. ಸದಸ್ಯರುಗಳನ್ನು ಜಿಲ್ಲಾ ಮಟ್ಟದ ಸಮಾವೇಶಗಳಲ್ಲಿ, ವಿಚಾರ ಸಂಕಿರಣಗಳಲ್ಲಿ ಭಾಗವಹಿಸುವಂತೆ ಪ್ರೇರೇಪಿಸಬಹುದು. ದೊಡ್ಡ ಪ್ರಾಜೆಕ್ಟ್‌ಗಳಲ್ಲಿ ಸದಸ್ಯರುಗಳನ್ನು ಪಾಲ್ಗೊಳ್ಳುವಂತೆ ಮಾಡಿ ಅವರ ಸಲಹೆಗಳನ್ನು ತೆಗೆದುಕೊಳ್ಳಿ. ಇತರ ಕ್ಲಬ್‌ಗಳ ಕಾರ್ಯಚಟುವಟಿಕೆ ಹಾಗೂ ಸಭೆಗಳಿಗೆ ಸದಸ್ಯರುಗಳನ್ನು ಕರೆದುಕೊಂಡು ಹೋಗಿ. ರೋಟರಿ ಸದಸ್ಯರುಗಳ ನೆಟ್ ವರ್ಕ್‌ನ್ನುಅಭಿವೃದ್ಧಿ ಪಡಿಸಿ ಸಂಪರ್ಕ ಬೆಳೆಸಿಕೊಳ್ಳಿ. ರೋಟರಿ ಅಕ್ಷನ್ ಗ್ರೂಪ್‌ಗಳನ್ನು ಮಾಡಿ ಅವರುಗಳು ಅಕ್ಟಿವೇಟ್ ಆಗುವಂತೆ ಮಾಡಿಕೊಳ್ಳಿ ಹಾಗೂ ಅವರಿಗೆ ಸಂಬಂಧ ಪಟ್ಟಂತ ಕೆಲಸವನ್ನು ಮಾಡಿಕೊಳ್ಳಿ ಎಂದು ಸಲಹೆ ನೀಡಿದರು. ಉದಾಹರಣೆ ರೋಟರಿ ಕ್ಲಬ್ ಹೈದರಾಬಾದ್‌ನಲ್ಲಿ 700 ಜನ ಸದಸ್ಯರಿದ್ದಾರೆ. ಅವರೆಲ್ಲಾ ಒಂದೇ ದಿನ ಸಭೆಗೆ ಬರದಿದ್ದರೂ ಅವರುಗಳ ಅಕ್ಷನ್ ಗ್ರೂಪ್‌ಗಳ ಮೂಲಕ ತಮ್ಮ ಚಟುವಟಿಕೆಗಳನ್ನು ಮಾಡುತ್ತಿದ್ದಾರೆ. ಕ್ರೀಡೆಯಲ್ಲಿ ಆಸಕ್ತಿ ಇರುವವರು, ವೈದ್ಯರುಗಳು ಹೀಗೆ ಬೇರೆ ಬೇರೆ ಗುಂಪನ್ನು ಮಾಡಿಕೊಂಡು, ಆ ವಿಭಾಗದಿಂದ ಪ್ರತಿನಿಧಿಗಳು ಭಾಗವಹಿಸುತ್ತಾರೆ. ಒಟ್ಟಿನಲ್ಲಿ ರೋಟರಿ ಕ್ಲಬ್‌ನಡಿ ಚಟುವಟಿಕೆಗಳನ್ನು




















ಹೊಂದಿರುತ್ತಾರೆ ಎಂದರು. ರೋಟರಿಯಲ್ಲಿ ಕಾರ್ಪೋರೇಟ್ ಸದಸ್ಯತ್ವ ಮಾಡಿಕೊಳ್ಳಬಹುದು. ಉದಾಹರಣೆಗೆ ಬ್ಯಾಂಕಿನ ಮ್ಯಾನೇಜರ್ ಕೇಡನವರಿಗೆ ಬ್ಯಾಂಕೇ ಸದಸ್ಯತ್ವ ಶುಲ್ಕ ನೀಡುತ್ತದೆ. ಅಂಥವರು ರೋಟರಿಗೆ ಬಂದಲ್ಲಿ ತಮ್ಮ ವೃತ್ತಿಯ ಅನುಭವಗಳನ್ನು ಹಂಚಿಕೊಳ್ಳಬಹುದು. ರೋಟರಿಯಲ್ಲಿ ತಮ್ಮ ಕುಟುಂಬದ ಸದಸ್ಯರುಗಳೂ ಸಹ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಬಹುದಾಗಿದೆ. ಅದರಲ್ಲೂ ನಮ್ಮ ಮಕ್ಕಳೂ ಸಹ ಸೇವಾ ಕಾರ್ಯಗಳಲ್ಲಿ ತೊಡಗಿಕೊಳ್ಳುವಂತೆ ಮಾಡಬಹುದು. ನಮ್ಮ ತಂದೆಯವರು ರೋಟರಿ ಸದಸ್ಯರಾಗಿದ್ದರು. ಅವರು ವಿವಿಧೆಡೆ ವರ್ಗಾವಣೆಯಾದರೂ ರೋಟರಿ ಸದಸ್ಯತ್ವವನ್ನು ನಿರಂತರವಾಗಿಟ್ಟುಕೊಂಡವರು. ಅವರ ಜೊತೆಗೆ ನಾನೂ ಸೇವಾ ಕಾರ್ಯಗಳಲ್ಲಿ ಹಾಗೂ ಸಭೆಗಳಲ್ಲಿ ಪಾಲ್ಗೊಂಡಿದ್ದರಿಂದ ರೋಟರಿಯಲ್ಲಿ ತೊಡಗಿಸಿಕೊಳ್ಳುವಂತಾಯಿತು. ಈ ಸಮಾಜದ ಎಲ್ಲರಿಂದ ಎಷ್ಟು ಪಡೆಯುತ್ತೇವೆ. ಅದರ ಋಣತೀರಿಸಲು ನಾವು ಕೆಲಸ ಮಾಡಬೇಕಾಗಿದೆ. ಈ ಚಿಂತನೆಯಲ್ಲಿ ರೋಟರಿಯನ್ನು ತೊಡಗಿಸಿಕೊಂಡಿದ್ದೇನೆ. ಈಗಿನ ಪೀಳಿಗೆಗೆ ಇವೆಲ್ಲವೂ ಕಷ್ಟವಾಗಿದೆ. ಆದರೂ ಅವರುಗಳು ರೋಟರಿಯ ಸೇವಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂತಾಗಬೇಕು ಈ ವರ್ಷದ ಸ್ಲೋಗನ್ UNITE FOR GOOD ನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಕಾರ್ಯಗಳಾಗಬೇಕು ಎಂದರು.

ಅಧ್ಯಕ್ಷರಾದ ರೊ.ಆರ್. ಆನಂದ್‌ರವರು ಮಾತನಾಡಿ ಯಾವುದೇ ಕಾರ್ಯಕ್ರಮಗಳಾದರೂ ಸದಸ್ಯರ ಹಾಜರಾತಿ ಮುಖ್ಯವಾಗಿರುತ್ತೆ. ಹೆಚ್ಚು ಸದಸ್ಯರುಗಳು ಜೊತೆಯಾಗಿ ಸಹಕರಿಸಿದರೆ ಸಮುದಾಯ ಕಾರ್ಯಕ್ರಮಗಳನ್ನು ಮಾಡಲು ಅನುಕೂಲವಾಗುತ್ತದೆ ಎಂದರು. ಇಂದಿನ ಮುಖ್ಯ ಅತಿಥಿಗಳು ಉಪಯುಕ್ತ ವಿಷಯ ಸದಸ್ಯತ್ವದ ಬಗ್ಗೆ ಮಾತನಾಡಿದ್ದಕ್ಕೆ ತಮ್ಮ ಕೃತಜ್ಞತೆ ಅರ್ಪಿಸಿದರು. ರೊ.ಹೆಚ್.ಡಿ. ಉದಯಶಂಕರ ಶಾಸ್ತ್ರಿ ಮತ್ತು ರೊ. ಹೆಚ್.ಎಸ್. ಮೋಹನ್‌ರವರು ಮುಖ್ಯ ಅತಿಥಿಗಳಾದ ರೊ.ಕೆ.ಬಿ.ಪ್ರಸನ್ನರವರಿಗೆ ನೆನಪಿನ ಕಾಣಿಕೆ ನೀಡಿ ಗೌರವಿಸಿದರು.

ರೊ.ಪಿಡಿಜಿ. ಡಾ. ಆರ್.ಡಿ.ಪ್ರಭುರವರ ಹುಟ್ಟು ಹಬ್ಬದ ಪ್ರಯುಕ್ತ ಅವರನ್ನು ವೇದಿಕೆಗೆ ಆಹ್ವಾನಿಸಿ ನೆನಪಿನ ಕಾಣಿಕೆ ನೀಡಲಾಯಿತು ಮತ್ತು ಅಂದಿನ ಸಭೆಗೆ ಅವರು ಉಪಾಹಾರವನ್ನು ಏರ್ಪಡಿಸಿದ್ದರು.

ಕೊನೆಯಲ್ಲಿ ಮಾಜಿ ಅಧ್ಯಕ್ಷರಾದ ರೊ. ಹೆಚ್.ಎಸ್. ಮೋಹನ್‌ರವರು ಎಲ್ಲರನ್ನೂ ಹೆಸರಿಸುತ್ತಾ ಮುಖ್ಯ ಅತಿಥಿಗಳಿಗೆ ಮತ್ತೆಲ್ಲರಿಗೆ ಸವಿಸ್ತಾರವಾಗಿ ವಂದನಾರ್ಪಣೆ ಮಾಡಿದರು.




FROM ROTARY NEWS -

**METICULOUS PLANNING BEHIND A MAGICAL PROJECT – DG Mahaveera Bothra**

**– written by Rasheeda Bhagat in Rotary News**

Than started planning by constituting separate committees; we formed 16 committees, for food, planning, safety and security of the children, sponsorship etc., The catering was done by Arusuvai Sridhar, who had catered for MukeshAmbani, Rajanikanth, etc., adds a beaming Bothra.

More than the food, he adds, the packing material was much more expensive; as the food was to be served to children in a moving train, it had to be packed in such a way it would not spill and make a mess.

That morning, Chennai's Central station more a festive look with over 1000 special children, more than 400 attenders, and over 200 Rotarians and Rotaractors, all dressed in bright yellow T-shirts with the Rotary logo, marched towards the special Train.

Letters seeking permission had to be given to Andhra Chief Minister Chandrababu Naidu, TN Chief Minister M.K. Stalin, the Devasthanam committee, vigilance department, Commissioner of Police in Chennai 18 Letters were required and given, and the permission came slowly but surely. Next we had to plan a sit-down (annadanam) at Tirumala. In travelling each compartment also had its own security personnel and was locked so that no child would attempt to open the doors. There were also two Rotarians and to Rotaractors in each coach.

The Rotarians also had to keep in mind any medical emergency. I wrote to Apollo Hospitals saying we need an ambulance and some doctors in case there is a medical emergency during the trip. Within one hour I got a letter, without having to use any influence, that the request had been approved. They also gave Rs.1.5 lakhs for caps for the children, and said the hospital will station two ambulances, one in Chennai and one in Ranugunta with 20 doctors, all free of cost.

There was a flutter when at 12.30 pm after entering Tirumala it was found two children were missing, but they were found quickly. The group "got VVIP treatment; we got direct entry, accompanied by security detail, there would have been nearly 100 police / security personnel. And for the annadanam, we gave donation of Rs.1.51 lakh to the Devasthanam," says the governor.

In all the trip cost Rs.75 lakh but more than the money, it was the fear of something going amiss even for a single child. "In my mind, there were constant questions on what if some body died during the trip, or if there is an accident, what would I do? In the last five days I was so worried that I sought insuranace cover for all travelers ; they offered cover of Rs. 5.0 lakhs but I raised it to Rs.25 lakhs and paid the premium of Rs.1.63 lakhs.

The smiles of the children, each of them carrying a precious TirupatiLaddoo was his reward. "Thanks to Rotary and its network, we were able to give this wonderful experience to some special children. And I would like to thank all the clubs of our district as they helped to plan and execute this very rewarding project." Bothra adds.

**ಕಂಬನಿ:**

ನಮ್ಮ ಕ್ಲಬ್‌ನ ಮಾಜಿ ಸದಸ್ಯರಾಗಿದ್ದ ಹಾಗೂ ಜನಪ್ರಿಯ ಮೂಳೆ ತಜ್ಞರಾಗಿದ್ದ ಡಾ.ವಾಸುದೇವ ಕಾಮತ್‌ರವರು ಇತ್ತೀಚೆಗೆ ದೈವಾಧೀನರಾಗಿದ್ದಾರೆ. ಅವರ ಅಗಲಿಕೆಯ ದು:ಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬದವರಿಗೆ ದೊರಕಲಿ ಎಂದು ವಿಶ್ವಮಿತ್ರ ಬಳಗ ಆ ಭಗವಂತನಲ್ಲಿ ಕೋರುತ್ತದೆ.

## ಸಂಪಾದಕೀಯ

### ಸಾಧನೆಯೊಂದೇ ಶಾಶ್ವತ



ನಿಮಗೆ ವಿಶ್ವ ವಿಖ್ಯಾತ ನೃತ್ಯ ಪಟು ಮೈಕಲ್ ಜಾಕ್ಸನ್ ಗೊತ್ತಲ್ಲ. ಆತ 150 ವರ್ಷ ಬದುಕುತ್ತೇನೆ ಎಂದು ಸಾವಿಗೆ ಚಾಲೆಂಜ್ ಮಾಡಿದ್ದ. ಆದರೆ ಕೊನಗೂ ಸಾವೇ ಗೆದ್ದಿತು. 50 ವರ್ಷ ವಯಸ್ಸಿನ ಮೈಕಲ್ ಜಾಕ್ಷನ್ ಶವವಾಗಿ ಮಲಗಿದ್ದ.

ಮೈಕಲ್ ಜಾಕ್ಸನ್ 150 ವರ್ಷ ಬದುಕಲು ಮಾಡಿಕೊಂಡಿದ್ದ ತಯಾರಿ ಹೇಗಿತ್ತು ಗೊತ್ತೆ? ಅಚ್ಚರಿ ಆದರೂ ಸತ್ಯ.

ಕ್ಯಾಲಿಫೋರ್ನಿಯ ಲಾಸ್ ಏಂಜೆಲ್ಸ್ ನಗರದ 12 ಜನ ವಿಶ್ವ ಪ್ರಸಿದ್ಧ ವೈದ್ಯರನ್ನು ಕೆಲಸಕ್ಕೆ ನೇಮಿಸಿದ್ದ. ಪ್ರತಿ ದಿನ ಅವರು ಮೈಕಲ್ ಜಾಕ್ಸನ್ ಪರೀಕ್ಷೆ ಮಾಡುತ್ತಿದ್ದರು.

ಮೈಕಲ್ ಜಾಕ್ಸನ್ ಊಟ ಪ್ರತಿ ದಿನ ಲ್ಯಾಬೋರೇಟರಿಯಲ್ಲಿ ತಪಾಸಣೆ ಆದ ನಂತರ ಸೇವಿಸುತ್ತಿದ್ದ.

15 ಜನರನ್ನು ತನ್ನ ವ್ಯಾಯಾಮ ಮತ್ತು ಇತರೆ ದಿನನಿತ್ಯದ ಕೆಲಸಕ್ಕೆ ನೇಮಿಸಿದ್ದ. ಮಲಗುವ ಹಾಸಿಗೆಯಲ್ಲಿ ತಂತ್ರಜ್ಞಾನದ ಮೂಲಕ ಆಮ್ಲಜನಕ ನಿಯಂತ್ರಣದ ವ್ಯವಸ್ಥೆ ಮಾಡಿಕೊಂಡಿದ್ದ. ತನ್ನ ಆರೋಗ್ಯದಲ್ಲಿ ಏರುಪೇರು ಆದಾಗ ಯಾವುದೇ ತೊಂದರೆ ಆಗಬಾರದು ಎಂದು ದೇಹದ ಅಂಗಾಂಗ ದಾನ ಮಾಡುವವರನ್ನು ಅತೀ ಹೆಚ್ಚು ಬೆಲೆಗೆ ಖರೀದಿ ಮಾಡಿದ್ದ.

ಕಾರಣ ಇಷ್ಟೇ 150 ವರ್ಷ ಬದುಕುವ ಕನಸು ಈ ಎಲ್ಲಾ ತಯಾರಿಗೆ ಕಾರಣವಾಗಿತ್ತು.

ಕಾಲದ ತೀರ್ಮಾನದ ಮುಂದೆ ಮೈಕಲ್ 150 ವರ್ಷ ಬದುಕುವ ಕನಸು ಕಮರಿತ್ತು. 25 ಜೂನ್ 2009 ರಂದು ಮೈಕಲ್ ಜಾಕ್ಸನ್ ಎನ್ನುವ ದೈತ್ಯ ಪ್ರತಿಭೆ ತನ್ನ 50 ವಯಸ್ಸಿನಲ್ಲಿ ಇಹಲೋಕ ತ್ಯಜಿಸಿದ.

150 ವರ್ಷ ಬದುಕಲೇ ಬೇಕು ಎಂದು 25 ವರ್ಷಗಳ ತಯಾರಿ ಮಣ್ಣು ಪಾಲಾಗಿತ್ತು. 12 ಜನ ವಿಶ್ವ ಪ್ರಸಿದ್ಧ ವೈದ್ಯರು ಮತ್ತು ಲಾಸ್ ಎಂಜೆಲ್, ಕ್ಯಾಲಿಫೋರ್ನಿಯಾ ವೈದ್ಯರು ಕೈಚೆಲ್ಲಿ ಕುಳಿತಿದ್ದರು. ಆಕ್ಸಿಜನ್ ಹಾಸಿಗೆ ಕೆಲಸಕ್ಕೆ ಬರಲಿಲ್ಲ. ಲ್ಯಾಬೋರೇಟರಿಯಲ್ಲಿ ಪರೀಕ್ಷೆ ಆದ ಊಟ ಹಳಸಿತ್ತು. ಅಂಗಾಂಗ ದಾನ ಮಾಡುವವರು, 15 ಜನ ಅಂಗ ರಕ್ಷಕರು ಮೈಕೆಲ್ ಹೆಣದ ಮುಂದೆ ಬದುಕಿ ರೋದಿಸುತ್ತಿದ್ದರು. ಮೈಕೆಲ್ ಜಾಕ್ಸನ್‌ಗೆ ಅಂಗಾಂಗ ದಾನ ಮಾಡಿದ್ದವರೂ ಕೂಡ ಬದುಕಿದ್ದರು.

ಮೈಕಲ್ ಜಾಕ್ಸನ್ ಸಾಕಷ್ಟು ಬಡವರಿಗೆ ಸಹಾಯಹಸ್ತ ಚಾಚಿದ್ದ. ಆದರೂ ವಿಧಿಯಾಟದ ಮುಂದೆ ಪ್ರಾಣ ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ.

ಈ ಸತ್ಯ ಕಥೆಯ ಸಾರಾಂಶ ಇಷ್ಟೇ. ಹಣ, ಆಸ್ತಿ, ಅಂತಸ್ತು, ಅಹಂಕಾರ ಯಾವುದೂ ಶಾಶ್ವತವಲ್ಲ. ಮೈಕಲ್ ಸತ್ತಾಗ 2.5 ಮಿಲಿಯನ್ ಜನ ಲೈವ್ ನಲ್ಲಿ ಶವ ಸಂಸ್ಕಾರ ಮಾಡುವುದನ್ನು ನೋಡಿದರು. ಕಾರಣ ಆತನ ಸಾಧನೆ !

ಆದರೆ ಸಾವು ಎನ್ನುವುದು ನಿಶ್ಚಿತ ಅದನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ. ಬದುಕಿದ್ದಾಗ ಹಸಿದವರಿಗೆ ಅನ್ನ ಹಾಕು, ನಿರ್ಗತಿಕರಿಗೆ ಕೈ ಹಿಡಿ, ನೊಂದವರ ಧ್ವನಿಯಾಗು, ಸ್ವಂತ ಶಕ್ತಿ ಮೇಲೆ ಸಾಧನೆ ಮಾಡಿ ಜಗತ್ತೇ ತಿರುಗಿ ನೋಡುವಂತೆ ಮಾಡು...

ಅದೇ ನಮ್ಮ ಸಾವಿನ ನಂತರ ಉಳಿಯುವುದು. ನಮ್ಮ ಸಾಧನೆ ಮತ್ತು ಹೆಸರು ಮಾತ್ರ...!

• ರೊ. ಎಂ. ಮಾಧವಾಚಾರ್

### ಮಾಜಿ ಅಧ್ಯಕ್ಷರಾದ ರೊ.ಡಿ.ಎಲ್. ಮಂಜುನಾಥರವರಿಂದ ರೋಟರಿ ನ್ಯೂಸ್

1) ರೋಟರಿ ಜಿಲ್ಲೆ 3132 ಮಹಾರಾಷ್ಟ್ರದ ಒಂದು ರೋಟರಿ ಜಿಲ್ಲೆಯ ಗವರ್ನರ್ ಆದ ರೊ.ಜಯೇಶ್‌ರವರು ಮಹಾರಾಷ್ಟ್ರದ 100 ಕ್ಲಬ್‌ಗಳಿಂದ 100 ಶಾಲೆಗಳಿಗೆ Digital Learning Equipment ಅಳವಡಿಸಿ ಯಶಸ್ವಿಗೊಳಿಸಿದ್ದಾರೆ. ಇಲ್ಲಿ ಗಮನಿಸಬೇಕಾದ ಪ್ರಮುಖ ಅಂಶವೇನೆಂದರೆ 100 ಕ್ಲಬ್‌ಗಳನ್ನು ಕ್ರಿಯಾತ್ಮಕವಾಗಿಡಲು ಪ್ರಾಜೆಕ್ಟ್‌ನ್ನೂ ಕೂಡ ಡಿಸ್ಟ್ರಿಕ್ಟ್ ನಿಂದಲೇ ನೀಡಿರುವುದು ಮತ್ತು 100 ಶಾಲೆಗಳಿಗೆ ರೋಟರಿ ವತಿಯಿಂದ ಇಂದಿನ ಯಾಂತ್ರಿಕ ವೇಗಕ್ಕೆ ತಕ್ಕಂತೆ ವಿದ್ಯಾಭ್ಯಾಸವನ್ನು ನವೀಕರಿಸಿರುವುದು ಬಹಳ ವಿಶೇಷ ಸಂಗತಿಯಾಗಿದೆ.

It is scientific approach. Example – Models of Science, Physics Mathematics is shown with digital pictures and 30 diagrams mode. Teachers are trained, required programme were supplied.

Each digital class Room set up Rs.60000.00. Total project event upto 60.00 lakhs. An Outstanding project.

2) ಮಧ್ಯ ಪ್ರದೇಶದ Morena ದ ರೋಟರಿ ಕ್ಲಬ್‌ನಿಂದ ಮಾರ್ಚ್ 2025 ರಂದು 21 ವೈದ್ಯರು, 17 ಸ್ವಯಂ ಸೇವಕರು ಮತ್ತು ಶುಶ್ರೂಕಿಯರು ಸೇರಿ ಒಂದು ತಂಡ ಮಾಡಿಕೊಂಡು ಮೆಡಿಕಲ್ ಮಿಷನ್ ಎಂಬ ಶೀರ್ಷಿಕೆಯೊಂದಿಗೆ ಬಹಳ ದೊಡ್ಡ ಕ್ಯಾಂಪ್ ಏರ್ಪಡಿಸಿರುತ್ತಾರೆ. ಇದರಲ್ಲಿ ಬಹಳ ಮುಖ್ಯವಾಗಿ –


* 1,00,000 ಲಕ್ಷಜನರ ನೋಂದಣಿ
* 5129 ಓಪಿಡಿ
* 1048 ಶಸ್ತ್ರಚಿಕಿತ್ಸೆಗಳು

ಸುಮಾರು 200 ಕಿ.ಮಿ ದೂರದಿಂದ ಸಾವಿರಾರು ರೋಗಿಗಳು ಬಂದು ಭಾಗವಹಿಸಿದ್ದರು.

ಇದರಲ್ಲಿ – Repeated consultation.Rotary Enrolment. Cards distributed for identity. Main aim is to Medical Mission is not just about a group of Doctors and Volunteers. Travelling plans to provide health care. It is a project of LOVE COMPASSION. Deep commitment to alleviate human sufferings.

ಜನ್ಮ ದಿನದ ಶುಭಾಶಯಗಳು









Dr. R. D. Prabhu
09th Aug

To,

Book Post